Date :05-02-2016

## ಮಲೇಶ್ಯನ್ ಪಾಮೆಣ್ಣೆ ಫ್ಯೂಚರ್ ದರ ಹಿಂದಿನ 20 ತಿಂಗಳ ಗರಿಷ್ಠ ಮಟ್ಟಕ್ಕೆ

ಸತತ ಎರಡನೇ ದಿನವೂ ಹೆಚ್ಚಳ ಕಂಡ ಮಲೇಶ್ಯನ್ ಪಾಮೆಣ್ಣೆ ಫ್ಯೂಚರ್ ದರ ಹಿಂದಿನ 20 ತಿಂಗಳಲ್ಲ ಗರಿಷ್ಠ ಮಟ್ಟ ತಲುಪಿದೆ. ಲೂನಾರ್ ಹೊಸ ವರ್ಷದ ಹಬ್ಬಗಳ ಪ್ರಯುಕ್ತ ರಜೆಯಿರುವುದರಿಂದ ಮಲೇಶ್ಯಾದ ಫೆಬ್ರವರಿ ತಿಂಗಳ ಪಾಮೆಣ್ಣೆ ಉತ್ಪಾದನೆ ಇಳಿಕೆಯಾಗುವ ವ್ಯಾಪಾರಿಗಳ ಮುಂಚಿತ ನಿರೀಕ್ಷೆಯಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಎಪ್ರಿಲ್‌ನ ಪಾಮೆಣ್ಣೆ ಕಂಟ್ರಾಕ್ಟ್ 1.3% ಶೇಕಡಾ ಹೆಚ್ಚಳವಾಗಿ ಬಿಎಂಡಿಇ ದರ 3 ಫೆಬ್ರವರಿ 2016ನೇ ದಿನದ ಕೊನೆಗೆ 2547 ರಿಂಗಿಟ್ಸ್‌ಗಳಿಗೆ ಹೆಚ್ಚಳವಾಗಿದೆ. ಹಿಂದೆ ಮೇ 19, 2014 ರಂದು ಫ್ಯೂಚರ್ ದರ 2551 ರಿಂಗಿಟ್ಸ್‌ಗಳಾಗಿ ಹೆಚ್ಚಳವಾಗಿತ್ತೆನ್ನಲಾಗಿದೆ.